ಸಂಪಾದಕೀಯ

# ತಾಯಿ ಕಲಿಸಿದ ಪಾಠ



ಪ್ರತಿಯೊಬ್ಬರಿಗೂ ಜನ್ಮ ನೀಡಿದ ತಾಯಿಯೇ ಮೊದಲ ಗುರು. ಹುಟ್ಟಿದೊಡನೆಯೇ ಕಣ್ಣು ಬಿಟ್ಟು ಜಗತ್ತಿನ ಪ್ರತಿಯೊಂದನ್ನೂ ಪರಿಚಯಿಸಿಕೊಳ್ಳುವ ಮೊದಲೇ ಮಗು ತಾಯಿಯನ್ನು ನೋಡುತ್ತದೆ; ಅವಳ ಪ್ರೀತಿ, ಆರೈಕೆಗಳನ್ನು ಪಡೆಯುತ್ತದೆ. ಅಲ್ಲಿಂದ ಮುಂದೆ ಪ್ರತಿಯೊಂದನ್ನೂ ಕಲಿಸಿಕೊಡುವ ತಾಯಿ, ತನ್ನ ಪ್ರೀತಿಯೆಂಬ ದಿವ್ಯ ಸಾಧನದಿಂದ ಮಗುವಿಗೆ ಮಾರ್ಗದರ್ಶನ ಮಾಡುತ್ತಾಳೆ. ಲೌಕಿಕ ಜೀವನದಲ್ಲಿ ಇದು ತೀರ ಸಹಜವಾದ ಸಂಗತಿ. ಭಗವಂತನ ವಿಷಯಕ್ಕೆ ಬಂದಾಗ ಗುರುವೇ ತಾಯಿ ಮಾಡುವ ಕೆಲಸವನ್ನು ಮಾಡುತ್ತಾನೆ. ತನ್ನ ಶಿಷ್ಯನ ಮೇಲೆ ಗುರುವಿಗೂ ಮಮತೆ, ವಾತ್ಸಲ್ಯ, ಪ್ರೀತಿಗಳಿರಬಹುದಾದರೂ, ಎಲ್ಲ ಗುರುಗಳೂ ನೀಡುವ ಉಪದೇಶ ವಿಧಾನ ಒಂದೇ ರೀತಿಯದಲ್ಲ. ಹಲವರಿಗೆ ಪ್ರೀತಿಯೆಂಬುದು ಬೋಧನೆಗಾಗಿ ಇರುವ ಸಾಧನವೂ ಅಲ್ಲ. ಆದರೆ ಸಾಕ್ಷಾತ್ ಜಗನ್ಮಾತೆಯೇ ಜನ್ಮತಳೆದು ಬಂದು ಆಧ್ಯಾತ್ಮಿಕ ಪಥದಲ್ಲಿ ಮಾರ್ಗದರ್ಶನ ಮಾಡಿದರೆ? ಲೌಕಿಕ ಜೀವನದಲ್ಲಿ ಕಾಣುವ ಮಾತೃತ್ವದ ಗುಣಗಳೆಲ್ಲವೂ ಅಲ್ಲಿ ಘನೀಭವಿಸಿ, ಮಾತೃವಾತ್ಸಲ್ಯವೇ ಅಲ್ಲಿ ದೈವೀಶಕ್ತಿಯಾಗಿ ಪರಿಣಮಿಸಿ, ತನ್ನ ಮಕ್ಕಳಾದ ಪ್ರಪಂಚದ ಜೀವಿಗಳನ್ನೆಲ್ಲ ಸಂಸಾರವೆಂಬ ನದಿಯಾಚೆಗಿರುವ ಪರಬ್ರಹ್ಮವೆಂಬ ಮಹಾಸಮುದ್ರದೆಡೆಗೆ ಆಕೆ ಕರೆದೊಯ್ಯುವಳು. ಶ್ರೀಮಾತೆ ಶಾರದಾದೇವಿಯವರಲ್ಲಿ ನಾವು ಕಾಣುವುದು ಇದೇ ಮಹಿಮೆಯನ್ನು.

### ಎಣೆಯಿಲ್ಲದ ಪ್ರೀತಿ

ಶ್ರೀಮಾತೆ ತಮ್ಮ ಶಿಷ್ಯ-ಶಿಷ್ಯೆಯರಿಗೆ ನೇರ ಉಪದೇಶ ಕೊಟ್ಟಿರುವ ಉದಾಹರಣೆಗಳು ಸಾಕಷ್ಟಿವೆ; ಮಂತ್ರದೀಕ್ಷೆ, ಬ್ರಹ್ಮಚರ್ಯ, ಸಂನ್ಯಾಸ ನೀಡಿ ಅಕ್ಷರಾರ್ಥದಲ್ಲಿ ಆಧ್ಯಾತ್ಮಿಕ ಗುರುವಾಗಿ ಅವರು ಕೆಲವರನ್ನು ಹರಸಿದ್ದೂ ಇದೆ. ಆದರೆ ಎಲ್ಲದಕ್ಕಿಂತಲೂ ಹೆಚ್ಚಾಗಿ ಅವರು ತಮ್ಮ ಮಕ್ಕಳ ಜೀವನದ ಮೇಲೆ ಅಚ್ಚಳಿಯದ ಪ್ರಭಾವ ಬೀರಿದ ಅಂಶವೆಂದರೆ — ಅವರು ತೋರಿಸಿದ ಅಸೀಮ ಪ್ರೀತಿ. ಶ್ರೀಮಾತೆ ಹಲವು ವಿಷಯಗಳನ್ನು ಮಾತಿನ ಮೂಲಕ ಹೇಳಿ ಕಲಿಸುತ್ತಿರಲಿಲ್ಲ; ಅವರ ಪ್ರೀತಿಯೇ ಎಲ್ಲರ ಹೃದಯವನ್ನು ಹೊಕ್ಕುಬಿಡುತ್ತಿತ್ತು. ಅವರ ಪ್ರತಿಯೊಂದು ಚರ್ಯೆ, ನಡವಳಿಕೆ, ಜೀವನಕ್ರಮವೇ ಶಿಷ್ಯಂದಿರನ್ನು ಹಾಗೂ ಭಕ್ತರನ್ನು ಪ್ರಭಾವಿಸುತ್ತಿತ್ತು. ಅವರು ಆಡಿದ ಸಹಜ, ಸಾಮಾನ್ಯ ಮಾತುಗಳೇ ಶಿಷ್ಯರ ಹಾಗೂ ಭಕ್ತರ ಪಾಲಿಗೆ ಶ್ರೇಷ್ಠ ಉಪದೇಶವೆನಿಸುತ್ತಿತ್ತು. ಶ್ರೀಮಾತೆ ಎಲ್ಲೂ ಪ್ರವಚನ, ಉಪದೇಶಗಳನ್ನು ನೀಡಲಿಲ್ಲ — ಸರಳ ಮಾತಿನ ಮೂಲಕವೇ ದಿವ್ಯಪಥದ ಕಿರಣಗಳನ್ನು ಸೂಸಿಬಿಡುತ್ತಿದ್ದರು.

ಶ್ರೀಮಾತೆಯವರ ಪ್ರೀತಿ, ವಾತ್ಸಲ್ಯ, ಕಾಳಜಿ ಇವು ಲೌಕಿಕ ಬದುಕಿಗಿಂತ ತುಂಬ ಎತ್ತರದಲ್ಲಿತ್ತು. ಅವರ ಪ್ರೀತಿಯಲ್ಲಿ ಯಾವುದೇ ಸ್ವಾರ್ಥವಿರಲಿಲ್ಲ, ಯಾವುದೇ ಬಗೆಯ ಮೋಹ, ಆಸಕ್ತಿಗಳಿರಲಿಲ್ಲ. ಎಲ್ಲರನ್ನೂ ಅವರು ತಮ್ಮ ಮಕ್ಕಳೆಂದೇ ಕಂಡರು, ಅವರನ್ನೆಲ್ಲ ಅಹೇತುಕ ಪ್ರೀತಿಯಿಂದ ಪಾಲಿಸಿದರು. ಇದೇ ಸಾಮಾನ್ಯ ಮಾತೃತ್ವಕ್ಕೂ, ಶ್ರೀಮಾತೆಯಲ್ಲಿದ್ದ 'ದೈವೀ ಮಾತೃತ್ವ'ಕ್ಕೂ ಇರುವ ವ್ಯತ್ಯಾಸ. ಕೇವಲ ತಮ್ಮ ಶಿಷ್ಯರನ್ನಷ್ಟೇ ಅಲ್ಲ, ಜಗತ್ತಿನ ಪ್ರತಿಯೊಂದು ಜೀವಿಕೂಡ ತನ್ನ ಮಕ್ಕಳೇ; ಅಷ್ಟೇಕೆ ಕ್ರಿಮಿಕೀಟ- ಜಂತುಗಳೂ ತಮ್ಮ ಮಕ್ಕಳೇ ಎಂದು ಶ್ರೀಮಾತೆ ಹೇಳುತ್ತಾರೆ. 'ಜಗನ್ಮಾತೆ' ಎಂಬುದರ ಅರ್ಥ ಅದೇ ಅಲ್ಲವೆ? ಪ್ರತಿಯೊಂದು ಜೀವಿಯ ಸೃಷ್ಟಿ, ಪಾಲನೆ, ಲಯಗಳಿಗೆ ಕಾರಣಕರ್ತಳಾದ, ಜಗತ್ತಿನ ಪ್ರತಿಯೊಂದು ಆಗುಹೋಗನ್ನು ನಿಯಂತ್ರಿಸುವ, ಇಡೀ ಜಗತ್ತಿನ ಕಣಕಣದಲ್ಲೂ ನೆಲೆಸಿರುವ ಶಕ್ತಿರೂಪಿಣಿ ದೇವಿಯೇ ತಾನು ಎಂಬುದನ್ನು ಶ್ರೀಮಾತೆ ಶಾರದಾದೇವಿಯವರು ಹಲವು ಸಂದರ್ಭಗಳಲ್ಲಿ ಒಪ್ಪಿಕೊಂಡದ್ದಿದೆ. ಆದರೆ ಬಾಹ್ಯಜಗತ್ತಿಗೆ ಮಾತ್ರ ಅವರು ಸಾಮಾನ್ಯ ಹಳ್ಳಿಯ ಹೆಂಗಸು; ದೈನಂದಿನ ಕೆಲಸಗಳಲ್ಲೇ ಮುಳುಗಿದ್ದ ಒಬ್ಬಾಕೆ ಗ್ರಾಮೀಣ ಸ್ತ್ರೀ. ಯಾರು ಶ್ರೀಮಾತೆಯವರ ದೈವೀಸ್ವರೂಪವನ್ನು ಕಾಣಬಲ್ಲ ಶಕ್ತಿಯನ್ನು ಹೊಂದಿದ್ದರೋ, ಅವರಿಗೆ ಮಾತ್ರ ಶ್ರೀಮಾತೆ ತಮ್ಮ ನಿಜವಾದ ವ್ಯಕ್ತಿತ್ವವನ್ನು ತೋರಿಸಿ ಕೊಟ್ಟರು.

### ದೇವರನ್ನು ಕಾಣುವುದು ಹೇಗೆ?

ಭಗವಂತನನ್ನು ಪಡೆಯಲು ಏನು ಮಾಡಬೇಕು? ಯಾವ ರೀತಿಯ ಸಾಧನೆ ಮಾಡಿದರೆ ಸಾಕ್ಷಾತ್ಕಾರವುಂಟಾಗುವುದು? —

ಇದು ಸಾಮಾನ್ಯವಾಗಿ ಎಲ್ಲ ಸಾಧಕನನ್ನು ಕಾಡುವ ಪ್ರಶ್ನೆ. ಶ್ರೀಮಾತೆಯವರ ಬಳಿಗೆ ಬಂದವರೆಲ್ಲ ಅವರ ಬಳಿ ನೇರವಾಗಿ ಈ ಪ್ರಶ್ನೆಗಳನ್ನು ಕೇಳುತ್ತಿದ್ದರು. ಶ್ರೀಮಾತೆ ಅವರಿಗೆ ಸಾಮಾನ್ಯವಾಗಿ ನೀಡುತ್ತಿದ್ದ ಉತ್ತರ, 'ಭಗವಂತನಲ್ಲಿ ಶರಣಾಗು', 'ಒಂದೇ ಮನಸ್ಸಿನಿಂದ ಪ್ರಾರ್ಥಿಸು' ಅಥವಾ 'ಸಾಧನೆ, ಜಪತಪ ಮಾಡಬೇಕು' ಇತ್ಯಾದಿ. ಆದರೂ ಅನೇಕ ಸಂದರ್ಭಗಳಲ್ಲಿ ಪ್ರಶ್ನೆ ಕೇಳುವವನ ಸ್ವಭಾವ, ಮನಸ್ಥಿತಿ ಹಾಗೂ ಮಾನಸಿಕ ಸಿದ್ಧತೆಗಳನ್ನು ನೋಡಿಕೊಂಡು ಅವನಿಗೆ ಯಾವುದು ಸೂಕ್ತವೋ ಅಂಥ ಉಪದೇಶ ನೀಡುತ್ತಿದ್ದರು ಶ್ರೀಮಾತೆ.

ಭಗವಂತನ್ನು ಕಾಣುವುದಕ್ಕೆ ಶ್ರೀಮಾತೆ ಪ್ರಾರ್ಥನೆ, ಜಪ ಸಾಧನೆ, ಶರಣಾಗತಿ, ಭಕ್ತಿ, ಪೂಜೆ-ಭಜನೆ, ಭಗವಂತನ ಕೃಪೆ ಇವೆಲ್ಲವೂ ಅಗತ್ಯವೆನ್ನುತ್ತಿದ್ದರು. ಆದರೂ ಅವರು ಸುಲಭವಾಗಿ ಭಗವಂತನ ದರ್ಶನವಾಗುವುದು ಎನ್ನುತ್ತಿರಲಿಲ್ಲ; ಕಠಿಣ ಶ್ರಮ, ಸತತ ಸಾಧನೆಗಳು ಅತ್ಯಗತ್ಯ ಎನ್ನುತ್ತಿದ್ದರು: ''ಒಂದು ನಿರ್ದಿಷ್ಟ ಸಂಖ್ಯೆಯನ್ನು ಇಟ್ಟುಕೊಂಡು ಜಪ ಮಾಡುವುದು, ಜಪಮಾಲೆಯ ಮೇಲೋ ಬೆರಳುಗಳ ಮೇಲೋ ಎಣಿಸುವುದು, ಇವುಗಳ ಮುಖ್ಯ ಉದ್ದೇಶ ಮನಸ್ಸನ್ನು ಭಗವಂತನ ಕಡೆಗೆ ತಿರುಗಿಸುವುದು. ಅತ್ತಿತ್ತ ಓಡಿ ಹೋಗುವುದೇ ಮನಸ್ಸಿನ ಸ್ವಭಾವ. ಈ ಎಲ್ಲ ಸಾಧನೆಗಳಿಂದ ಮನಸ್ಸು ಭಗವಂತನ ಕಡೆಗೆ ತಿರುಗುತ್ತದೆ.'' *('ಶ್ರೀನುಡಿ', ಪು. ೨೩, ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಪ್ರಕಟಣೆ)*

''ಗಡಿಯಾರ 'ಟಿಕ್, ಟಿಕ್' ಶಬ್ದ ಮಾಡುವಂತೆ, ಭಗವಂತನ ನಾಮವನ್ನು ಸ್ಮರಿಸುತ್ತಲೇ ಇರಬೇಕು. ಅದೇ ಎಲ್ಲವನ್ನೂ ಕೊಡುತ್ತದೆ. ಇನ್ನೇನನ್ನೂ ಮಾಡಬೇಕಾಗಿಯೇ ಇಲ್ಲ.'' *(ಅಲ್ಲೇ ಪು. ೨೨)* ''ದಿನವೂ ಹದಿನೈದರಿಂದ ಇಪ್ಪತ್ತು ಸಾವಿರದವರೆಗೆ ಜಪ ಮಾಡಿದ್ದೇ ಆದರೆ ಪರಿಣಾಮವನ್ನು ಕಾಣಬಹುದು. ಯಾರೇ ಆಗಲಿ, ಮೊದಲು ಹೀಗೆ ಜಪ ಮಾಡಲಿ. ಆಮೇಲೆ ನನ್ನನ್ನು ಬಂದು ಕೇಳಲಿ. ಆದರೆ ಜಪವನ್ನು ಸ್ವಲ್ಪ ಮನಸ್ಸಿಟ್ಟು ಮಾಡಬೇಕು. ಸುಮ್ಮನೆ ಬಂದು ದೂರುತ್ತಾರೆ, 'ಜಪದಿಂದ ಏನೂ ಆಗುತ್ತಿಲ್ಲವಲ್ಲ, ಏಕೆ?' ಎಂದು.'' *(ಅಲ್ಲೇ, ಪು.೨೩)*

ಭಗವಂತನನ್ನು ಕುರಿತು ಮಾತನಾಡುವಾಗ ಶ್ರೀಮಾತೆ ಇತರರಿಗೆ ಉತ್ಸಾಹವುಂಟಾಗುವಂತೆ, ಧೈರ್ಯತುಂಬುವಂತೆ ಆತ್ಮೀಯವಾಗಿ ತಿಳಿಸಿಕೊಡುತ್ತಿದ್ದರು. ಅವರ ಸಾನ್ನಿಧ್ಯದಿಂದಲೂ, ಸರಳವಾದ ಮಾತುಗಳಿಂದಲೂ ಬಳಿಗೆ ಬಂದವರ ಸಂದೇಹವೆಲ್ಲ ಅಳಿಸಿ ಹೋಗುತ್ತಿದ್ದವು. ಕ್ಷೀರೋದಬಾಲಾ ರಾಯ್ ಎಂಬ ಭಕ್ತೆಗೆ ಅವರು ನೀಡಿದ ಉಪದೇಶ ಹೀಗಿದೆ: ''ಭಗವಂತ ನಿನ್ನನ್ನು ಎಲ್ಲಿ ಹೇಗಿಡುತ್ತಾನೋ, ಅಲ್ಲೇ ಸಂತೋಷದಿಂದ ಇರು. ಭಗವಂತನನ್ನು ಪ್ರಾರ್ಥಿಸುವುದು, ಅವನನ್ನು ಪಡೆಯುವುದು – ಇದೇ ಗುರಿ. ಅವನನ್ನು ಪ್ರಾರ್ಥಿಸಿದರೆ ಅವನು ನಿನ್ನ ಕೈಹಿಡಿದು ಕರೆದುಕೊಳ್ಳುತ್ತಾನೆ. ಅವನನ್ನು ಅವಲಂಬಿಸಿದ ಮೇಲೆ ನೀನು ಯಾವುದೇ ಭಯಪಡಬೇಕಾಗಿಲ್ಲ.'' *(ಶ್ರೀಶಾರದಾದೇವಿ ವಚನವೇದ, ಪು. ೨೯೧.)* ಶ್ರೀಮಾತೆಯವರ ಬಳಿಗೆ ಬರುತ್ತಿದ್ದ ಈ ಭಕ್ತೆ ಮುಂದೆ ಹೀಗೆ ಬರೆಯುತ್ತಾಳೆ: ''ಶ್ರೀಮಾತೆಯವರನ್ನು ನೋಡಿಯೇ ನಾನು ಆನಂದದಿಂದ ತುಂಬಿಹೋಗುತ್ತಿದ್ದೆ. ನಾನು ಎಲ್ಲವನ್ನೂ ಪಡೆದಿದ್ದೇನೆ, ಎಲ್ಲವೂ ನನಗೆ ಲಭಿಸಿತು, ಇನ್ನೇನೂ ಬಾಕಿ ಉಳಿದಿಲ್ಲ ಎಂದು ನನಗನ್ನಿಸಿತು. ನನ್ನ ಮಾತೆ ವಿಶ್ವಜನನಿ, ನನ್ನ ಇಷ್ಟದೇವತೆ ರಾಜರಾಜೇಶ್ವರಿ; ಗುರುವಿನ ರೂಪದಲ್ಲಿ ನನ್ನೆದುರು ನಿಂತಿದ್ದಾರೆ! ನಾನು ಇನ್ನೇನನ್ನು ಪಡೆಯಬೇಕಾಗಿದೆ? ಹೀಗೆ ಭಾವಿಸುತ್ತ ನಾನು ಕೊನೆಯಿಲ್ಲದ ಆನಂದವನ್ನು ಅನುಭವಿಸುತ್ತಿದ್ದೆ. ನಾನು ಶ್ರೀಮಾತೆಯವರ ಬಳಿ ಹೆಚ್ಚೇನೂ ಪ್ರಶ್ನೆ ಕೇಳುತ್ತಿರಲಿಲ್ಲ. ಶ್ರೀಮಾತೆ ತಾವಾಗಿಯೇ ಏನು ಹೇಳುತ್ತಿದ್ದರೋ ಅದನ್ನು ಕೇಳಿಯೇ ತೃಪ್ತಳಾಗುತ್ತಿದ್ದೆ.'' *(ಅಲ್ಲೇ, ಪು. ೨೯೨)* ಶ್ರೀಮಾತೆಯವರ ವ್ಯಕ್ತಿತ್ವವೇ ಅಂಥದು. ತಮ್ಮ ಸಾನ್ನಿಧ್ಯದಿಂದಲೇ ಭಕ್ತರ ಮನಸ್ಸನ್ನು ಶುದ್ಧಗೊಳಿಸಿಬಿಡುತ್ತಿದ್ದರು. ಅವರ ಒಂದೊಂದು ಮಾತೂ ಭಕ್ತರ ಪಾಲಿಗೆ ಸಂಜೀವಿನಿಯೆನಿಸಿಬಿಡುತ್ತಿತ್ತು.

### ಪ್ರಪಂಚದೊಂದಿಗೆ

ಕೆಲವು ಸಂತರ ಉಪದೇಶಗಳಲ್ಲಿ 'ಪ್ರಪಂಚದ ಮೇಲೆ ವೈರಾಗ್ಯ', 'ಲೌಕಿಕ ಜಗತ್ತನ್ನು ದಾಟಿ ಹೋಗುವುದು' ಎಂಬ ಮಾತುಗಳು ಬರುತ್ತವೆ. ಇಂತಹ ತೀವ್ರ ವೈರಾಗ್ಯದ, ಸರ್ವಸಂಗ ಪರಿತ್ಯಾಗದ ಉಪದೇಶಗಳನ್ನು ಶ್ರೀಮಾತೆ ಎಲ್ಲರಿಗೂ ನೀಡುತ್ತಿರಲಿಲ್ಲ. ಸಂನ್ಯಾಸಿಗಳಿಗೆ ಮಾತ್ರ ಅವರು ಪ್ರಪಂಚ ನಿಸ್ಸಾರವೆಂದು ಬೋಧಿಸುತ್ತಿದ್ದರು; ಉಳಿದವರಿಗೆಲ್ಲ ಸಂಸಾರದಲ್ಲಿದ್ದುಕೊಂಡೇ ಭಗವಂತನನ್ನು ಪಡೆಯುವ ಮಾರ್ಗವನ್ನು ತಿಳಿಸಿಕೊಡುತ್ತಿದ್ದರು.

ಪ್ರಪಂಚದಲ್ಲಿ ನಾವು ಹೇಗಿರಬೇಕು? ಯಾವ ರೀತಿ ಜನರ ನಡುವೆ ಬದುಕಿದರೆ ನಮಗೆ ಶಾಂತಿ, ನೆಮ್ಮದಿ ಹಾಗೂ ಆಧ್ಯಾತ್ಮಿಕ ಪ್ರಗತಿಯುಂಟಾಗುವುದು? ಈ ವಿಚಾರವಾಗಿ ಶ್ರೀರಾಮಕೃಷ್ಣರು ನೀಡಿರುವ ಅಮೂಲ್ಯ ಉಪದೇಶಗಳಂತೆಯೇ ಶ್ರೀಮಾತೆಯವರ ಬೋಧನೆಗಳೂ ಅತ್ಯಂತ ಉಪಯುಕ್ತವಾಗಿವೆ. ಶ್ರೀಮಾತೆ ಸರಳವಾಗಿಯೂ ನೇರವಾಗಿಯೂ ಹೇಳುವ ಮಾತುಗಳು ಪ್ರಾಯೋಗಿಕವಾಗಿರುತ್ತಿದ್ದವು; ಕೈಗೂಡದ ಆದರ್ಶಗಳನ್ನೆಂದೂ ಅವರು ಜನರ ಮುಂದಿಡುತ್ತಿರಲಿಲ್ಲ. ''ಬಹಳ ಎಚ್ಚರಿಕೆಯಿಂದ ಜೀವನ ಸಾಗಿಸಬೇಕು. ಪ್ರತಿಯೊಂದು ಒಳ್ಳೆಯ ಕೆಲಸವೂ ಅದಕ್ಕೆ ತಕ್ಕ ಪ್ರತಿಫಲವನ್ನು ನೀಡುವುದು. ಇತರರ ಬಗ್ಗೆ ಕಟುವಾದ ನುಡಿಗಳನ್ನು ಆಡುವುದು ಒಳ್ಳೆಯದಲ್ಲ. ಹಾಗೆ ಮಾಡಿದರೆ ಇತರರ ನೋವಿಗೆ ನೀನೇ ಕಾರಣವಾಗುವೆ.'' *(Teachings of Sarda Devi, P.95)* ''ಎಲ್ಲರನ್ನೂ ಸಮಾನವಾಗಿ ಪ್ರೀತಿಸುವುದು ಹೇಗೆ ಎಂದು ಹೇಳುತ್ತೇನೆ, ಕೇಳು. ನೀನು ಯಾರನ್ನು ಪ್ರೀತಿಸುವೆಯೋ ಅವರಿಂದ ಏನನ್ನೂ ನಿರೀಕ್ಷಿಸಬಾರದು. ಹಾಗೆ ನಿರೀಕ್ಷಿಸಿದರೆ, ಆಗ ನೀನು ಹೆಚ್ಚು ಕೊಟ್ಟವರನ್ನು ಹೆಚ್ಚು ಪ್ರೀತಿಸುತ್ತೀಯೆ; ಕಡಿಮೆ ಕೊಟ್ಟವರನ್ನು ಕಡಿಮೆ ಪ್ರೀತಿಸುತ್ತೀಯೆ. ಹೀಗೆ ನೀನು ಎಲ್ಲರನ್ನೂ ಸಮಾನವಾಗಿ ಪ್ರೀತಿಸಲು ಆಗುವುದಿಲ್ಲ.'' *(ಶ್ರೀನುಡಿ, ಪು. ೨೯)*

ಶ್ರೀಮಾತೆಯವರ ಬಳಿಗೆ ಬರುವತ್ತಿದ್ದವರು ಹಲವು ಬಗೆಯ ಸ್ವಭಾವದಿಂದ ಕೂಡಿರುತ್ತಿದ್ದರು. ಎಲ್ಲರೂ ಅವರ ಮುಂದೆ ಆಧ್ಯಾತ್ಮಿಕ ವಿಚಾರಗಳನ್ನು ಮಾತ್ರ ಮಾತನಾಡುತ್ತಾರೆ ಎಂದೇನೂ ಇರಲಿಲ್ಲ. ತಮ್ಮ ತಮ್ಮ ಸಮಸ್ಯೆಗಳು, ಗೊಂದಲ, ಪ್ರಾಪಂಚಿಕ ಕಷ್ಟನಷ್ಟ ಹಾಗೂ ರೋಗರುಜಿನಗಳು, ಅವುಗಳಿಗೆ ಪರಿಹಾರ – ಎಲ್ಲವನ್ನೂ ಶ್ರೀಮಾತೆಯವರ ಮುಂದೆ ಹೇಳಿಕೊಳ್ಳುತ್ತಿದ್ದರು. ಶ್ರೀಮಾತೆ ಅವರಿಗೆ ನೀಡುತ್ತಿದ್ದ ಸಲಹೆ, ಮಾರ್ಗದರ್ಶನ, ಸಾಂತ್ವನದ ನುಡಿಗಳು ಅವರ ಹೃದಯವನ್ನು ಹಗುರ ಮಾಡುತ್ತಿದ್ದವು, ಹಾಗೂ ಅದರಿಂದ ಅವರ ಅನೇಕ ಸಮಸ್ಯೆಗಳು ಪರಿಹಾರವಾಗುತ್ತಿದ್ದವು. ಶ್ರೀಮಾತೆಗೆ ಪ್ರತಿಯೊಬ್ಬರ ಬೇಗೆ, ಬಳಲಿಕೆ, ನೋವುಗಳು ಅರ್ಥವಾಗುತ್ತಿದ್ದವು. ಅದಕ್ಕನುಗುಣವಾಗಿ ಅವರು ಸ್ಪಂದಿಸುತ್ತ ಭಗವಂತನಲ್ಲಿ ಪ್ರಾರ್ಥಿಸುತ್ತಿದ್ದರು. ಸರಯೂಬಾಲಾ ದೇವಿ ಎಂಬ ಭಕ್ತೆಗೆ ಅವರು ಹೇಳಿದ್ದರು, ''ಮನಸ್ಸಿನಲ್ಲಿ ನೀನು ಹೀಗೆ ಭಾವಿಸಿಕೊ – ಬೇರೆ ಯಾರೂ ಇಲ್ಲದಿದ್ದರೂ ನನಗೊಬ್ಬಳು 'ತಾಯಿ' ಇದ್ದಾಳೆ ಅಂತ.'' ಶ್ರೀಮಾತೆ ಈ ರೀತಿ ತಮ್ಮ ನುಡಿಗಳಿಂದ ಭಕ್ತರ ಹೃದಯದಲ್ಲಿ ಧೈರ್ಯ ತುಂಬುತ್ತಿದ್ದರು.

ಪ್ರಾಪಂಚಿಕ ಸಮಸ್ಯೆಗಳಿಗೆ ಅವರು ತೋರಿಸಿಕೊಡುತ್ತಿದ್ದ ಪರಿಹಾರಗಳು ಪ್ರಾರ್ಥನೆ, ಶರಣಾಗತಿಗಳಷ್ಟೇ ಅಲ್ಲ; ಉತ್ತಮ ನಡವಳಿಕೆ, ಸಾಮಾನ್ಯ ಬುದ್ಧಿಶಕ್ತಿಗಳಿಂದ ಅನೇಕ ತೊಂದರೆಗಳನ್ನು ನಿವಾರಿಸಿಕೊಳ್ಳಬಹುದು ಎನ್ನುತ್ತಿದ್ದರು. ಸಹನೆ, ಕರುಣೆ, ಅನುಕಂಪೆ, ಸೇವೆ ಮುಂತಾದ ಗುಣಗಳನ್ನು ಬೆಳೆಸಿಕೊಳ್ಳಬೇಕೆಂದು ಅವರು ಭಕ್ತರಿಗೆ ಹೇಳುತ್ತಿದ್ದರು. 'ಹೊಂದಿಕೊಂಡೇ ಹೋಗಬೇಕು', 'ಅಪ್ರಿಯ ಸತ್ಯವನ್ನೆಂದಿಗೂ ಅನಗತ್ಯವಾಗಿ ಆಡಬಾರದು' ಎಂಬಂತಹ ಲೌಕಿಕ ನಡವಳಿಕೆಯ ಮಾತುಗಳನ್ನೂ ಅವರು ಆಡುತ್ತಿದ್ದರು. ''ಕರುಣೆ ಇಲ್ಲದವನನ್ನು ಮನುಷ್ಯ ಎಂದು ಕರೆಯಲು ಹೇಗೆ ಸಾಧ್ಯ?'' ಎನ್ನುತ್ತಾರೆ ಶ್ರೀಮಾತೆ. *(ಶ್ರೀನುಡಿ, ಪು. ೨೯).* ''ಪ್ರೀತಿ ಏನನ್ನು ಬೇಕಾದರೂ ಸಾಧಿಸಬಲ್ಲುದು. ಬಲವಂತವಾಗಿಯೋ ಅಥವಾ ಸುತ್ತು ಬಳಸು ವಿಧಾನದಿಂದಲೋ ಯಾರನ್ನೂ ನೀನು ಹೇಳಿದಂತೆ ಕೇಳುವ ಹಾಗೆ ಮಾಡಲು ಸಾಧ್ಯವಿಲ್ಲ'' *(ಅಲ್ಲೇ)* – ಈ ಬಗೆಯ ಉಪದೇಶಗಳು ಲೌಕಿಕ ಜೀವನದಲ್ಲೂ ನಾವು ನಡೆಯಬೇಕಾದ ವಿಧಾನವನ್ನು ಹೇಳಿಕೊಡುತ್ತವೆ. ಇಲ್ಲಿ ಕೂಡ ಭಗವಂತನ ಶಕ್ತಿ, ಸಾನ್ನಿಧ್ಯ, ಅವನ ಸ್ಮರಣೆ ಹಾಗೂ ಉಪಾಸನೆ ಅತ್ಯಗತ್ಯವೆನ್ನುತಾರೆ ಶ್ರೀಮಾತೆ. ಅವರ ಪಾಲಿಗೆ ಲೌಕಿಕ, ಆಧ್ಯಾತ್ಮಿಕಗಳೆಂದು ಎರಡು ಜಗತ್ತುಗಳಿಲ್ಲ; ಇಡೀ ಜಗತ್ತೇ ಭಗವಂತನಿಂದ ಪರಿಪೂರ್ಣವಾಗಿದೆ. ನಾವು ಅದನ್ನು ಕಂಡುಕೊಳ್ಳಬೇಕು ಅಷ್ಟೆ. ಅವರು ಹೇಳುತ್ತಾರೆ: ''ಈ ಜಗತ್ತು ಭಗವಂತನದು. ಅವನು ನಮ್ಮನ್ನು ಎಲ್ಲೇ ಇಡಲಿ, ಏನೇ ಮಾಡಲಿ ನಾವು ಅದನ್ನು ಸಮಾಧಾನದಿಂದ ತೆಗೆದುಕೊಳ್ಳಬೇಕು. ಶ್ರದ್ಧಾಭಕ್ತಿಗಳಿಂದ ನಾವು ಸಂಪೂರ್ಣ ಭಗವಂತನಲ್ಲಿ ಶರಣಾಗಬೇಕು.'' *(ಶ್ರೀನುಡಿ. ೮.)* ಹೀಗೆ ಸಾಧಕನ ನಡೆ, ನುಡಿ, ಸ್ವಭಾವಗಳು ಮುಖ್ಯವೆನ್ನುತ್ತಿದ್ದರು.

## ಕೆಲಸ ಮತ್ತು ಸಾಧನೆ

ಶ್ರೀಮಾತೆಯವರು ಕೆಲಸಕ್ಕೆ ಅತ್ಯಂತ ಮಹತ್ವ ನೀಡಿದ್ದರು. ''ಕರ್ಮದಿಂದ ಮಾತ್ರ ಕರ್ಮಬಂಧನದಿಂದ ಪಾರಾಗಬಹುದು, ಕರ್ಮ ಮಾಡದೆ ಇರುವುದರಿಂದಲ್ಲ. ಪೂರ್ಣ ಅನಾಸಕ್ತಿ ಆಮೇಲೆ ಬರುತ್ತದೆ'' ಎನ್ನುತ್ತಾರೆ. *(ಶ್ರೀನುಡಿ, ೧೭)* ''ದಿನದ ಇಪ್ಪತ್ತ ನಾಲ್ಕು ಗಂಟೆ ಧ್ಯಾನ–ಚಿಂತನೆಗಳಲ್ಲಿ ತೊಡಗಿರಲು ಯಾರಿಗೂ ಸಾಧ್ಯವಿಲ್ಲ. ಆದ್ದರಿಂದ ಕೆಲಸ ಮಾಡಲೇಬೇಕು. ಇದರಿಂದ ಮನಸ್ಸು ಲವಲವಿಕೆಯಿಂದ ಇರುತ್ತದೆ.'' *(ಅಲ್ಲೇ.)* ಸ್ವತಃ ತಾವೇ ಅತ್ಯುತ್ತಮ ಕರ್ಮಯೋಗಿಯಾಗಿದ್ದರು ಶ್ರೀಮಾತೆ. ಅತ್ಯಂತ ವೇಗವಾಗಿ ಹಾಗೂ ಅಚ್ಚುಕಟ್ಟಾಗಿ ಕೆಲಸ ಮಾಡಿ ಮುಗಿಸುವ ಕಲೆ ಅವರಿಗೆ ಸಿದ್ಧಿಸಿತ್ತು ಎಂದು ಅವರ ಶಿಷ್ಯಂದಿರು ಹೇಳುತ್ತಾರೆ. ಗೃಹಕೃತ್ಯ, ಇತರರಿಗೆ ಸಹಾಯ ಮಾಡುವುದು, ತನ್ನವರಿಗಾಗಿ ಮಿಡಿಯುವ ಹೃದಯ, ಅವರಿಗೆ ಏನನ್ನಾದರೂ ಮಾಡಲು ಸಿದ್ಧರಾಗಿರುವುದು – ಇವನ್ನು ನಾವು ಶ್ರೀಮಾತೆಯವರ ಜೀವನದಲ್ಲಿ ನೋಡುತ್ತೇವೆ. ತಮ್ಮ ಬಂಧುವರ್ಗ, ಭಕ್ತಜನರು, ಶಿಷ್ಯಂದಿರು, ಶಾಂತಿಯನ್ನರಸಿ ದೂರದಿಂದ ಬಂದವರು, ದೀಕ್ಷೆಗಾಗಿ ಬೇಡುವ ಸಾಧಕರು – ಇವರ ನಡುವೆ ಇದ್ದುಕೊಂಡು, ಎಲ್ಲ ಶಿಷ್ಯಂದಿರಿಗಾಗಿ, ತಮ್ಮ ಮಕ್ಕಳ ಏಳಿಗೆಗಾಗಿ ನಿರಂತರ ಪ್ರಾರ್ಥಿಸುತ್ತಿದ್ದರು. ಸ್ವತಃ ತಾವು ಅನುಭವಿಸಿ ಕಂಡುಕೊಂಡ ಸತ್ಯವನ್ನೇ ಅವರು ಇತರರಿಗೂ ಈ ಹೇಳುತ್ತಾರೆ: ''ಒಂದು ವಸ್ತು ಎಷ್ಟೇ ಕ್ಷುಲ್ಲಕವೆನಿಸಿದರೂ ಅದನ್ನು ಅಲಕ್ಷ್ಯ ಮಾಡಬಾರದು. ಪ್ರತಿಯೊಂದಕ್ಕೂ ಸಲ್ಲಬೇಕಾದ ಗೌರವವನ್ನು ಸಲ್ಲಿಸಬೇಕು. ಒಂದು ಪೊರಕೆಯನ್ನೂ ಗೌರವದಿಂದ ಕಾಣಬೇಕು. ತೀರ ಸಣ್ಣ ಕೆಲಸವನ್ನೂ ಗೌರವದಿಂದ ಮಾಡಬೇಕು.'' *(ಅಲ್ಲೇ ಪು. ೧೯)*

## ಮಾತೃತ್ವದ ದೈವೀ ಆದರ್ಶ

ಶ್ರೀಮಾತೆ ಜಗತ್ತಿಗೆ ತೋರಿಸಿ ಕೊಟ್ಟಿರುವುದು ಮಾತೃತ್ವದ ಹಿಂದಿರುವ ದೈವೀ ಆದರ್ಶವನ್ನು. ಸ್ತ್ರೀಯಾದವಳು ಪರಿಪೂರ್ಣತೆಯನ್ನು ಹೊಂದುವುದು ಮಾತೃತ್ವದಿಂದ. ಇದಕ್ಕೆ ದೈಹಿಕವಾದ, ಮನೋವೈಜ್ಞಾನಿಕವಾದ ಅಥವಾ ಸಾಮಾಜಿಕ–ಸಾಂಸ್ಕೃತಿಕ ಆಧಾರವಿದೆ ಎನ್ನುವ ವಾದಗಳನ್ನೆಲ್ಲ ದಾಟಿ ಹೋಗಿ, ಎಲ್ಲದಕ್ಕೂ ಮೂಲವಾಗಿರುವ ಆಧ್ಯಾತ್ಮಿಕ ಸತ್ಯವೇ ಭಗವಂತನನ್ನು ತಾಯಿಯಾಗಿ ಕಾಣುವುದಕ್ಕೆ ಆಧಾರವೆಂಬುದನ್ನು ಶ್ರೀಮಾತೆಯವರ ಅದ್ಭುತ ಜೀವನ ತೋರಿಸಿಕೊಟ್ಟಿದೆ. ಯಾವುದೇ ತತ್ತ್ವವನ್ನು ಪ್ರತಿಪಾದಿಸದೆ, ಯಾವ ಪಂಥವನ್ನೂ ಪ್ರತಿನಿಧಿಸದೆ, ಅಥವಾ ಯಾವುದೋ ಒಂದು ಮಾರ್ಗವನ್ನು ಪುರಸ್ಕರಿಸದೆ ತಮ್ಮ ಅದ್ಭುತ ಜೀವನದಿಂದಲೇ ಶ್ರೀಮಾತೆ ತಮ್ಮ ಮಾತೃಪ್ರೇಮವನ್ನು ಸಕಲ ಮಾನವರೆಡೆಗೆ ಹರಿಸಿದರು; ಸಮಸ್ತ ಚರಾಚರವನ್ನೂ ಅವರು ತಮ್ಮದಾಗಿಸಿಕೊಂಡರು. ಭಾರತೀಯ ಸಂಸ್ಕೃತಿ ಜಗತ್ತಿಗೆ ನೀಡಿರುವ ಮಹತ್ತರ ಕೊಡುಗೆಯೇ ಮಾತೃತ್ವದ ದೈವೀ ಆದರ್ಶ. ಅದರ ಅತ್ಯುತ್ತಮ ಜೀವಂತ ನಿದರ್ಶನವೇ ಶ್ರೀಮಾತೆ ಶಾರದಾದೇವಿಯವರು.